**ಅಸಲು ದಾವೆ ನಂ- 52/2017**

**ಪಿ. ಡಬ್ಲ್ಯೂ-1**

**ಇಂದು ದಿನಾಂಕ 20.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ 1, 2 , 4 ರಿಂದ 7 ನೇ ಪ್ರತಿವಾದಿ ಪರ ವಕೀಲರು**

ನನ್ನ ಮದುವೆ ಯಾವ ಸಾಲಿನಲ್ಲಿ ಆಗಿದೆ ನೆನಪಿಲ್ಲ ಆದರೆ 30 ವರ್ಷಗಳ ಹಿಂದೆ ಆಗಿದೆ. ನನ್ನ ಮಾವನ ಹೆಸರು ಗುರುಲಿಂಗಪ್ಪ. ನನ್ನ ಅತ್ತೆ ಹೆಸರು ನೀಲಮ್ಮ. ನನ್ನ ಅತ್ತೆ ಮಾವಂದಿರಿಗೆ ಕಲಾವತಿ , ನರಸಮ್ಮ , ಮಲಕಪ್ಪ ಮತ್ತು ಸಿದಗೊಂಡಪ್ಪ ಮಕ್ಕಳು ಅಂದರೆ ಸರಿ. ನನ್ನ ಅತ್ತೆ ನೀಲಮ್ಮರವರು 1980 ರಲ್ಲಿ ಮೃತಪಟ್ಟಿದ್ದಾರೆ ಅಂದರೆ ಸರಿ. ಆ ಸಂದರ್ಭದಲ್ಲಿ ನನ್ನ ಗಂಡ ಮತ್ತು ಆತನ ಸಹೋದರ, ಸಹೊದರಿಯರು ಅಲ್ಪವ್ಯಯಿಗಳು ಇದ್ದರು ಅಂದರೆ ಸರಿ. ನನ್ನ ಗಂಡ ಮತ್ತು ಆತನ ಸಹೋದರ, ಸಹೋದರಿಯರು ಅಲ್ಪವ್ಯಯಿ ಇದ್ದ ಕಾರಣ ಅವರ ಪಾಲನ, ಪೋಷಣೆಗೆ ನನ್ನ ಮಾವ ಗುರುಲಿಂಗಪ್ಪರವರು 4 ನೇ ಪ್ರತಿವಾದಿಯನ್ನು ಮದುವೆ ಆದ ಅಂದರೆ ಸರಿ. 1983 ರಲ್ಲಿ ನನ್ನ ಮಾವ ಗುರುಲಿಂಗಪ್ಪ ಮತ್ತು 4 ನೇ ಪ್ರತಿವಾದಿಯ ವೈವಾಹಿಕ ಜೀವನದಿಂದ 2 ನೇ ಪ್ರತಿವಾದಿ ನೀಲಪ್ಪರವರು ಜನಿಸಿದರು ಅಂದರೆ ಸರಿ.

ಗುರುಲಿಂಗಪ್ಪನ ಎಲ್ಲ ಮಕ್ಕಳಿಗೂ ದಾವಾ ಸ್ವತ್ತಿನಲ್ಲಿ ಸಮಾನ ಹಕ್ಕು ಇದೆ ಅಂದರೆ ಸರಿಯಲ್ಲ. ನನ್ನ ಗಂಡ 1 ನೇ ಪ್ರತಿವಾದಿಯೇ ಒಟ್ಟು ಕುಟುಂಬದ ಯಜಮಾನಿಕೆ ಮಾಡುತ್ತಿದ್ದ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಕುಟುಂಬದ ಎಲ್ಲ ಬ್ಯಾಂಕ ವ್ಯವಹಾರಗಳು, ಸಹೋದರಿಯರ ಮದುವೆ ಇತ್ಯಾದಿಯನ್ನು ಆತನು ಸುಶಿಕ್ಷಿತನಾಗಿದ್ದರಿಂದ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪೈಕಿ 15 ಎಕರೆ ಕ್ಷೇತ್ರದ ಜಮೀನನ್ನು ಬ್ಯಾಂಕಿನ ಸಾಲ, ವಗೈರೆ ತಗೆಯಲು ಕೇವಲ ನಾಮ ಮಾತ್ರಕ್ಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿದ್ದರು ಅಂದರೆ ಸರಿಯಲ್ಲ. ನನ್ನ ಗಂಡ ಆತನ ಸಹೋದರ , ಸಹೋದರಿಯರ ನಡುವೆ ಇಲ್ಲಿಯವರೆಗೆ ಯಾವುದೇ ರೀತಿ ಪಾಲು ವಿಭಾಗ ಆಗಿರುವುದಿಲ್ಲ ಹಾಗಾಗಿ ಎಲ್ಲ ದಾವಾ ಸ್ವತ್ತುಗಳಲ್ಲಿ ಸಮಾನ ಹಕ್ಕು ಇದೆ ಅಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಸಾಲ ಹೆಚ್ಚಾಗಿದ್ದರಿಂದ ತನ್ನ ಭಾಗದ ಹಿಸ್ಸೆಗೆ 3 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಯಾವುದೇ ಆಸ್ತಿ ಕೊಡಬಾರದು ಎಂದು ಹೇಳಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

1 ರಿಂದ 7 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೇ ಅದರಿಂದ ಬಂದ ಆದಾಯವನ್ನು ಸಮನಾಗಿ ಹಂಚಿಕೊಂಡು ಬಂದಿದ್ದಾರೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ.ಸಿ**
**ಇಂಡಿ.**